ದಿನಾಂಕಃ 08-07-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ವಿ ಎಂ ವಕೀಲರಿಂದ**

1. 1 ನೇ ಪ್ರತಿವಾದಿ ನನ್ನ ಸಹೋದರಿಯ ಮಗಳು ಎಂದರೆ ಸರಿ . ಆಕೆಯ ಗಂಡ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ದಾಂಪತ್ಯದಿಂದ ಯಾವುದೇ ಮಕ್ಕಳಾಗಿಲ್ಲ ಎಂದರೆ ಸರಿ . 1 ನೇ ಪ್ರತಿವಾದಿಯ ಗಂಡ ತೀರಿಕೊಂಡ ನಂತರ ನನ್ನ ಮಗ ಕಿರಣನನ್ನು ಆಕೆಗೆ ದತ್ತಕಕ್ಕೆ ಕೊಟ್ಟಿದ್ದೆನೆ ಎಂದರೆ ಸರಿ . 1 ನೇ ಪ್ರತಿವಾದಿಯ ಗಂಡನ ಅಕ್ಕ ತಂಗಿಯರು ಸಿವಿಲ್ ದಾವೆಗಳನ್ನು ಹಾಕಿದ್ದು ಸದರಿ ದಾವೆದಲ್ಲಿ ನಾನು 1 ನೇ ಪ್ರತಿವಾದಿ ಪರವಾಗಿ ಪ್ರಕರಣಗಳನ್ನು ನಡೆಸಿದ್ದೆನೆ ಎಂದರೆ ಸರಿ . ಆಕೆಯ ಪರವಾಗಿ ಕುಂದಗೋಳ ಹಾಗೂ ಬೆಳಗಾವಿ ನ್ಯಾಯಾಲಯದಲ್ಲಿ ವಕೀಲರನ್ನು ನೇಮಿಸಿದ್ದೆ ಎಂದರೆ ಸರಿ . ನಾನು 1 ನೇ ಪ್ರತಿವಾದಿ ಸೋದರ ಮಾವನಾದ ಕಾರಣ ನನ್ನ ಮೇಲೆ ಆಕೆಗೆ ಅತೀಯಾದ ನಂಬಿಕೆ ಇತ್ತು ಎಂದರೆ ಸರಿ . 2008 ನೇ ಇಸ್ವಿಯಿಂದ ದಾವಾ ಆಸ್ತಿ ಒಳಗೊಂಡು ಬಾಳಾಸಾಬನ ಸ್ವತ್ತುಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ . ಧಾರವಾಡ ಕಂದಾಯ ನ್ಯಾಯಾಲಯ , ಕುಂದಗೋಳ ಸಿವಿಲ್ ನ್ಯಾಯಾಲಯ ಹಾಗೂ ಬೆಳಗಾವಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣಗಳ ಮಾಹಿತಿ ಇದೆ . ದಾವಾ ಸ್ವತ್ತುಗಳ ಸಂಬಂಧ ಗೌರವಾನ್ವಿತ ಜಿಲ್ಲಾ ನ್ಯಾಯಾಲಯ ಬೆಳಗಾವಿ ಹಾಗೂ ಉಚ್ಚ ನ್ಯಾಯಾಲಯ ಧಾರವಾಡದಲ್ಲಿ ಪ್ರಕರಣ ಇದ್ದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ . ದಾವಾ ಆಸ್ತಿಗೆ ಸಂಬಂಧ ಜಿಲ್ಲಾ ನ್ಯಾಯಾಲಯ ಬೆಳಗಾವಿ ಎಫ್ ಡಿ ಪಿ ನಂಃ 12/2016 ರಂತೆ ಪ್ರಕರಣ ವಿಚಾರಣೆಗೆ ಬಾಕಿ ಇದೆ ಎಂದರೆ ಗೊತ್ತಿಲ್ಲ . ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿ ಹಾಗೂ ವಾದಿ ಪಕ್ಷಗಾರರಿದ್ದಾರೆ ಎಂದರೆ ಗೊತ್ತಿಲ್ಲ . ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ನಿಪಿ-1 ರ ಉತಾರಿನಲ್ಲಿ ಅಲ್ಪವಯಿ ಸಂರಕ್ಷಣಾದಾರ ಎಂದು ನನ್ನ ಹೆಸರು ಇದೆ ಎಂದರೆ ಸರಿ . ನಿಪಿ-1 ರಲ್ಲಿ ಜಿಲ್ಲಾ ನ್ಯಾಯಾಲಯ ಬೆಳಗಾವಿ ಪ್ರಕರಣ ನಮೂದು ಇದೆ ಎಂದರೆ ಸರಿ . ಯಾವ ಕಾರಣಕ್ಕೆ ನಮೂದಾಗಿದೆ ಎಂದು ಚೌಕಾಶಿ ಮಾಡಿಲ್ಲ ಎಂದರೆ ಸರಿ .

2. ಖರೀದಿ ವ್ಯವಹಾರದ ದಿನ ಸದರಿ ನಿಪಿ-1 ನ್ನು ತಡೆಯಾಜ್ಞೆ ಇರುವ ಸಂಬಂಧ ಚೌಕಾಶಿ ಮಾಡಿದ್ದಿರಾ ಎಂದರೆ ಸಾಕ್ಷಿ ಸದರಿ ದಿನದಂದು ತಡೆಯಾಜ್ಞೆ ಇರಲಿಲ್ಲ ಎಂದು ಹೇಳುತ್ತಾರೆ .

ಸದರಿ ದಿನದಂದು ಕೇಸ್ ಪೆಂಡಿಂಗ್ ಇದ್ದ ಬಗ್ಗೆ ನಿಮಗೆ ಗೊತ್ತಿತ್ತಾ ಎಂದರೆ ಇಲ್ಲ . ದಿಃ 05.05.2020 ರಂದು ಖರೀದಿ ಕರಾರು ಪತ್ರ ನೊಂದು ಮಾಡಿಸಿದ ದಿನ ಬೆಳಗಾವಿ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದ ಬಗ್ಗೆ ಗೊತ್ತಿದೆ ಎಂದರೆ ಸರಿಯಲ್ಲ . ದಾವಾ ಆಸ್ತಿಯು ಕಿರಣ ಹಾಗೂ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ . ಸದರಿ ದಾವಾ ಆಸ್ತಿಯಲ್ಲಿ ಕಿರಣನಿಗಿರುವಷ್ಟೇ ಹಕ್ಕು 1 ನೇ ಪ್ರತಿವಾದಿಗೂ ಇದೆ ಎಂದರೆ ಸರಿ . ಖರೀದಿ ವ್ಯವಹಾರ 16 ಲಕ್ಷಕ್ಕೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ನಾನು ಹಾಗೂ ವಾದಿ ಜಂಟಿಯಾಗಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇವೆ ಎಂದರೆ ಸುಳ್ಳು . ವಾದಿ ಯಾವುದೇ ವ್ಯವಹಾರವನ್ನು ನನ್ನನ್ನು ಮುಂದಿಟ್ಟೇ ವ್ಯವಹಾರ ಮಾಡುತ್ತಾರೆ ಎಂದರೆ ಸರಿ . ನಾನು ಹಾಗೂ ವಾದಿ ಸೇರಿಕೊಂಡು 1 ನೇ ಪ್ರತಿವಾದಿ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ಖರೀದಿ ಸಂಚಕಾರ ಪತ್ರ ಸೃಷ್ಟಿಸಿದ್ದೆವೆ ಎಂದರೆ ಸರಿಯಲ್ಲ .

3. ಪ್ರತಿವಾದಿಗೆ ದಾವಾ ಸ್ವತ್ತು ಮಾರಾಟ ಮಾಡಲು ಏನು ಅಡಚಣೆ ಇತ್ತು ಎಂದರೆ ಸಾಕ್ಷಿಯು ಬ್ಯಾಂಕ್ ದಲ್ಲಿ ಬಂಗಾರ ಅಡವಿಟ್ಟು 1 ನೇ ಪ್ರತಿವಾದಿ ಸಾಲ ಪಡೆದಿದ್ದಾರೆ ಮುತ್ತೂಟ್ ಫೈನಾನ್ಸ ಗೋಕುಲ ರಸ್ತೆ , ಹುಬ್ಬಳ್ಳಿಯಲ್ಲಿ ಬಂಗಾರ ಗಿರವಿ ಇಟ್ಟಿದ್ದರು . 12 ಲಕ್ಷ ಪೂರ್ತಿ ಹಣ 1 ನೇ ಪ್ರತಿವಾದಿಗೆ ಕೊಡಲು ಮಾತುಕತೆಯಾಯಿತು . ಉಳಿದ 04 ಲಕ್ಷ ಹಣವನ್ನು ಸಹ ಆಕೆಗೆ ಕೊಡಬೇಕು ಎಂದು ಮಾತುಕತೆಯಾಗಿತ್ತು. ಕಿರಣನಿಗೆ ಸಹ ಖರೀದಿ ಹಣದಲ್ಲಿ ಪಾಲು ಕೊಡಲು ಮಾತುಕತೆಯಾಗಿತ್ತಾ ಎಂದರೆ ಇಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ . ಸಾಲ ಸೊಸೆ ಮಾಡಿಲ್ಲ ಕಾರಣ ಸಾಲ ತಿರುವಳಿ ಸಂಬಂಧ ಪೂರ್ತಿ ಹಣ ಅವಳಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದೆವು ಎಂದು ನುಡಿಯುತ್ತಾರೆ . ಕಿರಣನಿಗೆ ಬೇರೆ ಜಮೀನು ಇದ್ದ ಕಾರಣ ಸಂಚಕಾರ ಹಣ ನೀಡಿಲ್ಲ .

4. ದಾವಾ ಆಸ್ತಿಯನ್ನು ವಾದಿಗೆ ಬಿನ್ ಶೇತ್ಕಿ ಮಾಡುವ ಕರಾರು ಆಗಿತ್ತು ಎಂದರೆ ಸರಿಯಲ್ಲ . ಬಿನ್ ಶೇತ್ಕಿ ಮಾಡುವ ಕರಾರಿಗೆ ಒಳಪಟ್ಟು 12 ಲಕ್ಷ ರೂಪಾಯಿ 1 ನೇ ಪ್ರತಿವಾದಿಗೆ ಕೊಟ್ಟು ನಾನು ಹಾಗೂ 1 ನೇ ಪ್ರತಿವಾದಿ ಭದ್ರತೆಗಾಗಿ ಸಂಚಕಾರ ಪತ್ರ ಬರೆದುಕೊಟ್ಟಿದ್ದೆವು ಎಂದರೆ ಸರಿಯಲ್ಲ . ದಾವಾ ಆಸ್ತಿ ಕಿಮ್ಮತ್ತಿನ ಜಾಗ ಎಂದರೆ ಸಂಚಕಾರ ಮಾಡುವಾಗ ಹೆಚ್ಚು ಕಿಮ್ಮತ್ತು ಇರಲಿಲ್ಲ ಎಂದು ಹೇಳುತ್ತಾರೆ . ದಾವಾ ಆಸ್ತಿಯ ಸುತ್ತ ಮುತ್ತಲು ಬಿನ್ ಶೇತ್ಕಿ ಪ್ಲಾಟುಗಳು ಇವೆ ಎಂದರೆ ಸರಿ . ದಾವಾ ಆಸ್ತಿಯನ್ನು ಹೊರತುಪಡಿಸಿ ಶೇತ್ಕಿ ಜಮೀನು

ಇಲ್ಲ ಎಂದರೆ ಸರಿಯಲ್ಲ . ಬಿನ್ ಶೇತ್ಕಿ ಪ್ಲಾಟ್ ಗೆ ನಾವು ಮಾರಾಟ ಮಾಡಿದಾಗ 3-4 ಲಕ್ಷ ಇತ್ತು . ಈಗ ಏನು ಕಿಮ್ಮತ್ತು ಇದೆ ಎಂದು ನನಗೆ ಗೊತ್ತಿಲ್ಲ. ಪ್ರತಿ ಗುಂಟೆಗೆ 18-20 ಲಕ್ಷ ಇದೆ ಎಂದರೆ ನನಗೆ ಗೊತ್ತಿಲ್ಲ . ವಾದಿಯ ಮೂಲಕ 1 ನೇ ಪ್ರತಿವಾದಿಯ ಆಸ್ತಿ ಕಬಳಿಸಿ ದಾವಾ ಸ್ವತ್ತಿನಲ್ಲಿ ಬಂದ ಲಾಭವನ್ನು ಲೂಟಿ ಮಾಡಬೇಕೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಹೇಳುತ್ತಿದ್ದೆನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.